## ಮೊಬೈಲ್ ಪಕ್ಷಿ

ಇತ್ತೀಚೆಗೆ ಹಂಪಿ ವಿಶ್ವವಿದ್ಯಾಲಯದ ಪಕ್ಕದಲ್ಲಿ ಕರ್ನಾಟಕ ಅರಣ್ಯ ಇಲಾಖೆಯಿಂದ ಅಳಿವಿನಂಚಿನಲ್ಲಿರುವ ಪಕ್ಷಿಗಳನ್ನು ಉಳಿಸುವ, ಬೆಳೆಸುವ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಅಲ್ಲಿ ಮೊಬೈಲ್‌ನಿಂದ ತಯಾರಿಸಿದ ಈ ಪಕ್ಷಿ ಎಲ್ಲರ ಗಮನ ಸೆಳೆಯಿತು. ಬರೋಬ್ಬರಿ 2500 ಹಳೆಯ ಮೊಬೈಲ್‌ಗಳನ್ನು ಬಳಸಿ ತಯಾರಿಸಲಾದ ಈ ಪಕ್ಷಿ ಐದು ಅಡಿ ಎತ್ತರವಾಗಿದ್ದು, ಹತ್ತು ಅಡಿ ಉದ್ದವಿದೆ. ಮೊಬೈಲ್‌ಗಳಿಂದ ಪಕ್ಷಿಗಳು ವಿನಾಶ ಹೊಂದುತ್ತಿರುವ ಸಂದೇಶವನ್ನು ಎತ್ತಿ ತೋರಿಸುತ್ತಿತ್ತು.

**-ಚಂದ್ರಹಾಸ ಚಾರ್ಮಾಡಿ, ಬೆಳ್ತಂಗಡಿ**





## ಯಕ್ಷಗಾನ ವೇಷಧಾರಿ

ಮರದ ಕೆತ್ತನೆಯಲ್ಲಿ ಗುಡಿಗಾರರ ಕೈಚಳಕ ಅನನ್ಯವಾದದ್ದು. ಉತ್ತರಕನ್ನಡದ ಕಾರವಾರದ ಜಿಲ್ಲಾ ರಂಗ ಮಂದಿರದ ಪ್ರವೇಶ ದ್ವಾರಕ್ಕೆ ಯಕ್ಷಗಾನ ವೇಷಧಾರಿಯನ್ನು ಮರದಲ್ಲಿ ಚಿತ್ರಿಸಿದ್ದಾರೆ. ಜಿಲ್ಲೆಯ ಸಂಸ್ಕೃತಿಯ ಮಹತ್ವವನ್ನು ಸಾರುವ ಈ ಶಿಲ್ಪ ಕಲಾವಿದನ ನೈಪುಣ್ಯತೆಯನ್ನೂ ಎತ್ತಿ ಹಿಡಿದಿದೆ.

**-ದತ್ತಾತ್ರೇಯ ಭಟ್ಟ, ಕಣ್ಣಿಪಾಲ**

## ಕಟ್ಟಿಗೆಯ ಹ್ಯಾಂಗರ್

ಈ ಚಿತ್ರದಲ್ಲಿರುವ ಹ್ಯಾಂಗರ್ ಅನ್ನು ಕಟ್ಟಿಗೆಯಿಂದ ತಯಾರಿಸಲಾಗಿದೆ. ಹಿಂದೆ ಕಟ್ಟಿಗೆಯಿಂದ ತಯಾರಿಸಿದ ಈ ಹ್ಯಾಂಗರ್‌ಗೆ ಬಟ್ಟೆಯನ್ನು ನೇತು ಹಾಕುತ್ತಿದ್ದರು. ಈ ಹ್ಯಾಂಗರ್ ನಮ್ಮೂರಿನ ಶ್ರೀಶೈಲ ಅಂಗಡಿಯವರ ಮನೆಯಲ್ಲಿದೆ. ಇದಕ್ಕೆ ಒಂಬತ್ತು ಬಟ್ಟೆಗಳನ್ನು ನೇತು ಹಾಕಬಹುದು. ಇಂದು ಇಂತಹ ಹಳೆಯ ಪರಿಕರಗಳು ಕಣ್ಮರೆಯಾಗಿವೆ.

**-ಜಗದೀಶ ಎಂ. ಸಂಗಣ್ಣವರ, ಬೈಲಹೊಂಗಲ**

